ಆ) ಈ ಕೋರ್ಸನ್ನು ತೆಗೆಯುವ ಬಗ್ಗೆ ಸಾರ್ವಜನಿಕರಿಂದ, ವಿದ್ಯಾರ್ಥಿಗಳಿಂದ ಸಾಕಷ್ಟು ಬೇಡಿಕೆ ಬಂದಿರುವುದಿಲ್ಲವಾದ್ದರಿಂದ, ಈ ವಿಭಾಗದಲ್ಲಿ ತರಗತಿಗಳನ್ನು ನಡೆಸುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ಗ್ರಾಮಾಂತರ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಮೂಲಕ ವಸೂಲಾದ ಶುಲ್ಕ.

137 - ಶ್ರೀ ಅಂಜನಮೂರ್ತಿ (ನೆಲಮಂಗಲ) ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಮೂಲಕ ವಸೂಲಾದ ಮಾರುಕಟ್ಟೆ ಶುಲ್ಕವೆಷ್ಟು?

ಆ) ಇದರಲ್ಲಿ ಗ್ರಾಮಾಂತರ ಪ್ರದೇಶದ ರಸ್ತೆಗಳ ಅಭಿವೃದ್ಧಿಗಾಗಿ ಖರ್ಚು ಮಾಡಲಾದ ಮೊತ್ತವೆಷ್ಟು (ತಾಲ್ಲೂಕು ಹಾಗೂ ಹೋಬಳಿವಾರು ಮಾಹಿತಿ ಒದಗಿಸುವುದು) ಉಳಿದ ಹಣ ಯಾವಾಗ ಮೇಲ್ಕಂಡ ಕೆಲಸಕ್ಕೆ ಖರ್ಚು ಮಾಡಲಾಗುವುದು?

ಶ್ರೀ ಎಸ್.ಆರ್. ಮೋರೆ. (ಸಹಕಾರ ರಾಜ್ಯ ಸಚಿವರು):

ಅ) ಬೆಂಗಳೂರು ಗ್ರಾಮಾಂತರ ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಮಿತಿ ಎಂದು ಯಾವುದೇ ಸಮಿತಿ ಅಸ್ತಿತ್ವದಲ್ಲಿ ಇರುವುದಿಲ್ಲ. ಬೆಂಗಳೂರು ನಗರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಬೆಂಗಳೂರು ಚೆನ್ನಪಟ್ಟಣ ಮತ್ತು ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕೆಲಸ ನಿರ್ವಹಿಸುತ್ತಿವೆ(ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ ನಗರ ಜಿಲ್ಲೆಯ ತಾಲೋಕುಗಳೊಂದಿಗೆ ಗ್ರಾಮಾಂತರ ತಾಲೋಕುಗಳಾದ ನೆಲಮಂಗಲ, ದೇವನಹಳ್ಳಿ ಮತ್ತು ಹೊಸ ಕೋಟೆ ತಾಲೋಕುಗಳು ಬರುತ್ತವೆ.) ಈ ಮೂರು ಮಾರುಕಟ್ಟೆ ಸಮಿತಿಗಳಿಂದ 1989-90ರಿಂದ 1991ರ ಡಿಸಂಬರ್ ಅಂತ್ಯದವರೆಗೆ ವಸೂಲಿ ಮಾಡಿರುವ ಮೂರು ಕಟ್ಟೆ ಶುಲ್ಕ ಈ ಕೆಳಕಂಡಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

ಮಾರುಕಟ್ಟೆ ಸಮಿತಿಯ ಹೆಸರು	89-90	90-91	91-92
ಬೆಂಗಳೂರು	268.78	335.42	193.15
ಚನ್ನಪಟ್ಟಣ	7.84	7.65	8.16
ದೊಡ್ಡಬಳ್ಳಾಪುರ	1.72	1.85	3.03

ಆ) ಯಾವುದೇ ಖರ್ಚು ಮಾಡಿರುವುದಿಲ್ಲ.

ನೆಲಮಂಗಲ ಕ್ಷೇತ್ರದಲ್ಲಿ ಹಸಿರು ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆ

138 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಸಿರು ಕಾರ್ಡು ಹೊಂದಿರುವವರ ಸಂಖ್ಯೆ ಎಷ್ಟು? (ಹೋಬಳಿವಾರು ಮಾಹಿತಿ ನೀಡುವುದು)